# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಇವರು ನಿಯಮ-330 ರಡಿ ಮಂಡಿಸಿರುವ ಸೂಚನೆಗೆ ಉತ್ತರಿಸುವ ಬಗ್ಗೆ

**:: ಪ್ರಶ್ನೆ ::**

ಕಲಬುರಗಿಯಲ್ಲಿ ನಿರಂತರ ನೀರು ಸರಬರಾಜು ಯೋಜನೆಯ ಕಾರ್ಯಕ್ಕೆ ಇದುವರೆವಿಗೂ ಸುಮಾರು 90 ಕೋಟಿಗೂ ಹೆಚ್ಚು ಖರ್ಚುಮಾಡಲಾಗಿದ್ದರೂ ಇದುವರೆವಿಗೆ ಒಂದೇ ಒಂದು ಮನೆಗೂ ಸಹ ನೀರಿನ ಸಂಪರ್ಕ ಕಲ್ಪಿಸದಿರುವ ಬಗ್ಗೆ ಹಾಗೂ ಅಳವಡಿಸಿರುವ ಪೈಪ್‌ಗಳು ಅತ್ಯಂತ ಕಳಪೆ ಗುಣಮಟ್ಟದೆಂದು ಸಾಬೀತಾಗಿರುವ ಗಂಭೀರ ವಿಷಯದ ಕುರಿತು ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಗಮನ ಸೆಳೆಯಲಾಗಿದೆ.

**:: ಉತ್ತರ ::**

ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು ವಿಶ್ವ ಬ್ಯಾಂಕ್ ನೆರವಿನ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ"ಯಡಿ 24X7 ನಿರಂತರ ನೀರು ಸರಬರಾಜು ಯೋಜನೆ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 279 ಪಿ.ಆರ್.ಜೆ 2018, ದಿನಾಂಕ :22.10.2018 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ-ವರ್ಗಾವಣೆ (DBOT) ಮಾದರಿಯಲ್ಲಿ ಅನುಷ್ಠಾನಗೊಳಿಸಲು ಗುತ್ತಿಗೆ ಕಾಮಗಾರಿಯನ್ನು ಮೆ|| ಎಲ್ & ಟಿ ಲಿಮಿಟೆಡ್ ಚೆನ್ನೈ ರವರಿಗೆ ಗುತ್ತಿಗೆ ಕರಾರು ಸಂಖ್ಯೆ: IN-KUIDFC-99723-CW-RFB, ದಿನಾಂಕ:10.06.2020 ರಂದು ರೂ.837.43 ಕೋಟಿಗಳಿಗೆ ನೀಡಲಾಗಿದೆ. ಕರಾರಿನಂತೆ 6 ತಿಂಗಳಲ್ಲಿ ವಿನ್ಯಾಸ ಮತ್ತು ನಕ್ಷೆ ತಯಾರಿಸುವುದು, 4.5 ವರ್ಷಗಳಲ್ಲಿ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸುವುದು, ತದನಂತರ 12 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಗುತ್ತಿಗೆದಾರರು ನಿರ್ವಹಿಸಬೇಕಾಗಿರುತ್ತದೆ. ದಿನಾಂಕ:08.07.2021 ರಿಂದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಆಪರೇಟರ್ ರವರು ನಿರ್ವಹಿಸುತ್ತಿರುತ್ತಾರೆ. ಕರಾರಿನ ನಿಯಮಾನುಸಾರ ಗುತ್ತಿಗೆದಾರರು ದಿನಾಂಕ :09.06.2025 ರೊಳಗೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

**ಯೋಜನೆಯಡಿ ಅನುಷ್ಠಾನಗೊಳಿಸಬೇಕಾಗಿರುವ ಕಾಮಗಾರಿಗಳು ಅಂಶವಾರು ಪ್ರಗತಿ ಕೆಳಕಂಡಂತಿದೆ.**

| ಕ್ರ. ಸಂ | ಅಂಶ | ಗುರಿ | ಭೌತಿಕ ಪ್ರಗತಿ |
|---|---|---|---|
| 1 | ಹರಸೂರು ಗ್ರಾಮದ ಹತ್ತಿರ ಬೆಣ್ಣೆತೊರ ಜಲಾಶಯದಲ್ಲಿ ಜಾಕ್ವೆಲ್ ಮತ್ತು ಪಂಪ್ ಹೌಸ್ ನಿರ್ಮಾಣ | 1 | 5% |
| 2 | ಜಾಕ್ವೆಲ್ ನಲ್ಲಿ 4 ಸಂಖ್ಯೆ 1200 ಹೆಚ್.ಪಿ ಪಂಪ್ ಸೆಟ್ ಮತ್ತು ಎಲೆಕ್ಟ್ರಿಕಲ್ ಉಪಕರಣಗಳು | 1 Job | - |

| ಕ್ರ. ಸಂ | ಅಂಶ | ಗುರಿ | ಭೌತಿಕ ಪ್ರಗತಿ |
|---|---|---|---|
| 3 | ಜಾಕ್ವೆಲ್ ನಿಂದ ಸಲಾಂತೇಕಡಿ ವರೆಗೆ 1342 ಎಂಎಂ ವ್ಯಾಸದ ಎಂಎಸ್ 13.59 ಕಿ.ಮೀ ಉದ್ದ ಏರು ಕೊಳವೆ (RWTM) | 13.592 ಕಿ.ಮೀ | 11.61 ಕಿ.ಮೀ |
| 4 | ಸಲಾಂತೇಕಡಿಯಲ್ಲಿ 58.77 ಎಂಎಲ್ ಡಿ ಸಾಮರ್ಥದ ಜಲಶುದ್ಧೀಕರಣಗಾರ (WTP) | 58.77 ಎಂ.ಎಲ್.ಡಿ | 38% |
| 5 | ಸಲಾಂತೇಕಡಿಯಲ್ಲಿ ನೀರನ್ನು ಸಂಗ್ರಹಿಸಲು 5.5 ಎಂ.ಎಲ್ ಸಾಮರ್ಥ್ಯದ ನೆಲಮಟ್ಟದ ಜಲಸಂಗ್ರಹಗಾರ (GLSR) | 1 ಸಂಖ್ಯೆ | 39% |
| 6 | ಸಲಾಂತೇಕಡಿ ಜಲಶುದ್ಧೀಕರಣಗಾರದಿಂದ ಕಲಬುರಗಿ ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮೇಲೆತ್ತರದ ಜಲಸಂಗ್ರಹಗಾರಕ್ಕೆ ಶುದ್ಧ ನೀರು ಪೂರೈಕೆ ಮಾಡುವ ವಿವಿಧ ವ್ಯಾಸಗಳ ಕೊಳವೆ ಮಾರ್ಗ ಅಳವಡಿಸುವುದು (CWTM) | 35.519 ಕಿ.ಮೀ | 19.35 ಕಿ.ಮೀ |
| 7 | ನಗರದ ವಿವಿಧ ಬಡಾವಣೆಗಳಲ್ಲಿ ಹಾಲಿ ಇರುವ ಜಲಸಂಗ್ರಹಗಾರದ ಜೊತೆಗೆ 12 ಹೊಸ ಮೇಲೆತ್ತರ ಜಲಸಂಗ್ರಹಗಾರ (ELSRs) | 12 ಸಂಖ್ಯೆ | 36.7% |
| 8 | ನಗರದ ನಾಗರೀಕರಿಗೆ ನೀರು ಪೂರೈಕೆಮಾಡಲು ವಿವಿಧ ವ್ಯಾಸಗಳ 899 ಕಿ.ಮೀ ಉದ್ದದ ವಿತರಣಾ ಜಾಲ (CWDN) | 899 ಕಿ.ಮೀ | 5.3 ಕಿ.ಮೀ |
| 9 | ಗೃಹಗಳಿಗೆ ನಳ ಸಂಪರ್ಕ (HSC) | 62,767 ಸಂಖ್ಯೆ | - |

ಬೆಣ್ಣೆತೋರಾ ಜಲಾಶಯದಿಂದ 1.624 TMC ನೀರನ್ನು ಜುಲೈ-2022 ರಲ್ಲಿ ಕಲಬುರಗಿ ನಗರಕ್ಕೆ ಹಂಚಿಕೆ ಮಾಡಲಾಗಿದೆ. ಮೇಲೆ ತಿಳಿಸಿರುವಂತೆ, ಎಲ್ಲಾ ಅಂಶಗಳ ಕಾಮಗಾರಿಗಳು ಪ್ರಗತಿಯಲ್ಲಿದೆ. ನಗರದಲ್ಲಿ ವಿತರಣಾ ಜಾಲಕ್ಕೆ ಅಳವಡಿಸಬೇಕಾಗಿರುವ ಹೆಚ್ ಡಿಪಿಇ ವಿವಿಧ ವ್ಯಾಸಗಳ ಕೊಳವೆಗಳನ್ನು ತಯಾರಕರಾದ ಮೆ|| ಟೆಕ್ಸ್.ಮೋ ಕಂಪನಿ, ಮಧ್ಯಪ್ರದೇಶ ರವರಿಂದ ಮೆ|| ಎಲ್ & ಟಿ ಲಿಮಿಟೆಡ್ ಚೆನ್ನೈ ರವರು ಖರೀದಿಸಿ ಸುಮಾರು 100.00 ಕಿ.ಮೀಗಳು ಅಳವಡಿಸಿ ಸ್ಥಳದಲ್ಲಿ ನೀರಿನ ಒತ್ತಡದ ಪರೀಕ್ಷೆಯನ್ನು ಮಾಡಿದಾಗ ಕರಾರಿನಲ್ಲಿ ನಿಗಧಿಪಡಿಸಿರುವ ಒತ್ತಡ ತಡೆದುಕೊಳ್ಳಲು ವಿಫಲವಾದ ಕಾರಣ ಸದರಿ ಕೊಳವೆಯನ್ನು ಮೆ|| ಸಿಪೆಟ್ ಹೈದ್ರಾಬಾದ್ ನಲ್ಲಿ ಪರೀಕ್ಷಿಸಿ, ಪರಿಶೀಲನೆ ಮಾಡಿ ವರದಿ ನೀಡಲು ಕಳುಹಿಸಿಕೊಡಲಾಯಿತು. ಸದರಿಯವರ ವರದಿಯಲ್ಲಿ ಹೆಚ್.ಡಿಪಿಇ ಕೊಳವೆಯ ಕೆಲವು ಅಂಶಗಳ ಗುಣಮಟ್ಟವು ತೃಪ್ತಿಕರವಾಗಿರುವುದಿಲ್ಲವೆಂದು ವರದಿ ಬಂದ ಕಾರಣ ಮೆ|| ಎಲ್ & ಟಿ ಲಿಮಿಟೆಡ್ ಇವರು ಸರಬರಾಜು ಮಾಡಿದ ಎಲ್ಲಾ ಹೆಚ್.ಡಿಪಿಇ ಕೊಳವೆಗಳನ್ನು ತಿರಸ್ಕರಿಸಲಾಗಿದೆ ಹಾಗೂ ಈ ಕೊಳವೆಗಳಿಗೆ ಯಾವುದೇ ಬಿಲ್ಲನ್ನು ಪಾವತಿ ಮಾಡಿರುವುದಿಲ್ಲ. ಈ ಕಾರಣದಿಂದ ಹೊಸ ವಿತರಣಾ ಜಾಲದಿಂದ ಮನೆಗಳಿಗೆ ನಳಸಂಪರ್ಕ ನೀಡುವುದು ವಿಳಂಬವಾಗಿರುತ್ತದೆ. ಮುಂದುವರೆದಂತೆ, ಹೊಸ ಗುಣಮಟ್ಟದ ಹೆಚ್.ಡಿ.ಪಿ.ಇ ಕೊಳವೆಯನ್ನು ಸರಬರಾಜು ಮಾಡಿ ಕಾಮಗಾರಿಗೆ ಉಪಯೋಗಿಸಲು ಆದೇಶಿಸಲಾಗಿದೆ.

ಪ್ರಸ್ತುತ, ಮೆ|| ಎಲ್& ಟಿ ಲಿಮಿಟೆಡ್ ರವರು ವಿವಿಧ ತಯಾರಕರಿಂದ ತಯಾರಿಸಿದ ಗುಣಮಟ್ಟದ ವಿವಿಧ ವ್ಯಾಸದ ಹೆಚ್.ಡಿಪಿಇ ಕೊಳವೆಗಳನ್ನು ಸರಬರಾಜು ಮಾಡುತ್ತಿದ್ದು, ಸದರಿ ಕೊಳವೆಗಳು ಕರಾರಿನಲ್ಲಿ ನಿಗಧಿಪಡಿಸಿರುವ ಗುಣಮಟ್ಟದ್ದಾಗಿರುತ್ತದೆ. ಮೆ|| ಎಲ್&ಟಿ ಲಿಮಿಟೆಡ್ ರವರು ಕರಾರಿನ ನಿಗಧಿತ ಅವಧಿಯೊಳಗೆ ಕೆಲಸ ಮಾಡದೇ ವಿಳಂಬವಾಗಿರುವುದಕ್ಕೆ ಕರಾರಿನ ರೀತ್ಯಾ ಇದುವರೆಗೆ ರೂ.25.92 ಕೋಟಿಗಳು ದಂಡ ವಿಧಿಸಲಾಗಿದೆ. ಮೆ|| ಎಲ್&ಟಿ ಲಿಮಿಟೆಡ್ ರವರಿಗೆ ಕರಾರಿನಲ್ಲಿ ನಿಗಧಿಪಡಿಸಿರುವ ಎಲ್ಲಾ ಕಾಮಗಾರಿಗಳನ್ನು ದಿನಾಂಕ: 09.06.2025 ರೊಳಗೆ ಪೂರ್ಣಗೊಳಿಸಲು ಕಟ್ಟುನಿಟ್ಟಾಗಿ ಆದೇಶಿಸಿದೆ. ಕರಾರಿನ ನಿಯಮಾನುಸಾರ ಮೆ|| ಎಲ್&ಟಿ ಲಿಮಿಟೆಡ್ ರವರು ಪ್ರಥಮವಾಗಿ ಸಗಟು ಕುಡಿಯುವ ನೀರು ವ್ಯವಸ್ಥೆಯನ್ನು ಅನುಷ್ಠಾನಗೊಳಿಸಬೇಕು. ತದನಂತರ ವಿತರಣಾ ಜಾಲವನ್ನು ವಲಯವಾರು ಅಳವಡಿಸಿ ಸ್ಥಳದಲ್ಲಿ ನೀರಿನ ಒತ್ತಡದ ಪರೀಕ್ಷೆಯನ್ನು ಮಾಡಿ ನಂತರ ಮನೆ ನಳಸಂಪರ್ಕವನ್ನು ಹಂತ ಹಂತವಾಗಿ ಕರಾರಿನಲ್ಲಿ ನಿಗಧಿಪಡಿಸಿರುವಷ್ಟು ನೀಡಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದೆ. ಇದುವರೆಗೆ ಯೋಜನೆಗೆ ರೂ.90.03 ಕೋಟಿಗಳು ವೆಚ್ಚವಾಗಿರುತ್ತದೆ.

12/02/2024

**(ಬಿ. ಎಸ್. ಸುರೇಶ್)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು